ಅ. ಬಿಜಾಪುರ, ಬೀದರ್ ಗುಲಬರ್ಗಾ ಮತ್ತು ಪಟ್ಟದಕಲ್ಲು ಪ್ರವಾಸಿ ವೃತ್ತ (Circuit) ವನ್ನು 800ಲಕ್ಷ ರೂ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿ ಪಡಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಕೇಂದ್ರವು ಸಹ ಈ ಯೋಜನೆಯನ್ನು 2006–07ನೇ ಸಾಲಿನಲ್ಲಿ ಆರ್ಥಿಕ ನೆರವಿನ ಆಧ್ಯತಾ ಪಟ್ಟಿಯಲ್ಲಿ ಸೇರಿಸಿಕೊಂಡಿರುತ್ತದೆ. ಕೇಂದ್ರ ಸರ್ಕಾರವು ಮಂಜೂರಾತಿಯನ್ನು ನೀಡಿ ಹಣ ಬಿಡುಗಡೆ ಮಾಡಿದ ಕೂಡಲೇ ಮೇಲ್ಕಂಡ ಪ್ರವಾಸಿ ವೃತ್ತವನ್ನು ಅಭಿವೃದ್ಧಿಪಡಿಸಲು ಅಗತ್ಯ ಕ್ರಮ ಜರುಗಿಸಲಾಗುವುದು.

ಇ. ಅಂದಾಜು ವೆಚ್ಚ ರೂ. 800.00 ಲಕ್ಷಗಳು

ಈ. 2006–07ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ಹಣವನ್ನು ಪಡೆಯಲು ಕ್ರಮ ತೆಗೆದುಕೊಳ್ಳಲಾಗುವುದು.

460 (732) ಶ್ರೀ ಶಿವಾನಂದ ಎಸ್. ಪಾಟೀಲ್. (ಬಸವನಬಾಗೇವಾಡಿ): ಮಾನ್ಯ ಪ್ರವಾಸೋದ್ಯಮ, ಜವಳಿ ಮೂಲ ಸೌಕರ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಬಿಜಾಪುರದ ಗೋಳಗುಮ್ಮಟದಲ್ಲಿ ಪ್ರವಾಸಿಗರನ್ನು ಆಕರ್ಷಿಸುವ ಉದ್ದೇಶಕ್ಕಾಗಿ ಸರ್ಕಾರ ಶಬ್ದ ಮತ್ತು ಬೆಳಕಿನ ಪ್ರದರ್ಶನಕ್ಕಾಗಿ ಕ್ರಮಕೈಗೊಳ್ಳುವುದೆ;

ಆ. ಈ ಪ್ರದರ್ಶನವನ್ನು ಕೈಕೊಳ್ಳುವ ಉದ್ದೇಶಕ್ಕಾಗಿ ಕೇಂದ್ರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೆ;

ಇ. ಇದಕ್ಕಾಗಿ ತಗಲಬಹುದಾದ ಅಂದಾಜು ವೆಚ್ಚ ಎಷ್ಟು;

ಈ. ಪ್ರವಾಸಿಗರ ಆಕರ್ಷಣೆಗಾಗಿ ಬಿಜಾಪುರದ ಗೋಳಗುಮ್ಮಟದಲ್ಲಿ ಸಾಕಷ್ಟು ಸ್ಥಳಾವಕಾಶ ಲಭ್ಯವಿರುವುದರಿಂದ ಬೆಳಕು ಹಾಗೂ ಶಬ್ದ ಪ್ರದರ್ಶನವನ್ನು ಕೈಕೊಳ್ಳುವ ಕೆಲಸಕ್ಕೆ ಕಾಲಮಿತಿಯನ್ನು ಹಾಕಿಕೊಳ್ಳಲಾಗಿದೆಯೇ?

ಶ್ರೀ ಬಿ. ಶ್ರೀರಾಮುಲು (ಪ್ರವಾಸೋದ್ಯಮ, ಜವಳಿ ಮೂಲ ಸೌಕರ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ಸಚಿವರು):

ಅ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಕೇಂದ್ರದ ಅನುಮೋದನೆ ದೊರೆತನಂತರ ಗೊಳಗುಮ್ಮಟಕ್ಕೆ ಶಬ್ದ ಮತ್ತು ಬೆಳಕಿನ ವ್ಯವಸ್ಥೆ ಅಳವಡಿಸಲು ಕ್ರಮ ಜರುಗಿಸಲಾಗುವುದು.

ಆ. ಹೌದು.

ಇ. ಪ್ರಸ್ತಾವನೆಯ ಅಂದಾಜು ವೆಚ್ಚ ರೂ.185.46 ಲಕ್ಷಗಳು.

ಈ. ಗೋಳಗುಮ್ಮಟಕ್ಕೆ ಧ್ವನಿ ಮತ್ತು ಬೆಳಕು ಯೋಜನೆಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮಂಜೂರಾತಿ ದೊರಕಿದ ಕೂಡಲೇ ಕಾಮಗಾರಿ ಪ್ರಾರಂಭಿಸಲಾಗುವುದು ಇದಕ್ಕೆ ಯಾವ ಕಾಲಮಿತಿಯನ್ನು ಹಾಕಿಕೊಂಡಿರುವುದಿಲ್ಲ.